**ಪಾಠ–13** **ಜೂನ್ 19–25**

# ಹೊಸ ಒಡಂಬಡಿಕೆಯ ಜೀವನ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** 1 ಯೋಹಾನ 1:4; ಯೋಹಾನ 5:24; ರೋಮಾ 3:24,25; 2 ಕೊರಿಂಥ 5:21; 1 ಯೋಹಾನ 4:16; ಪ್ರಕ 2:11; ಪ್ರಕ 20:6,14; ಪ್ರಕ 21:8.

**ಸ್ಮರಣವಾಕ್ಯ : "ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು"** (ಯೋಹಾನ 10:10).

ಈ ತ್ರೈಮಾಸಿಕವು ಒಪ್ಪಂದದ ಕುರಿತಾದ ಒಂದು ಅಧ್ಯಯನವಾಗಿದೆ, (ಅದನ್ನು ಅದರ ಸರಳವಾದ ಶುದ್ಧ ಸ್ವರೂಪಕ್ಕೆ ಇಳಿಸಲು ಕೆತ್ತಿ ತೆಗೆಯಲಾಗಿದೆ). ಪಾಪದ ಅವಧಿಯಿಂದ ನಾನು ನಿಮ್ಮನ್ನು ಈ ರೀತಿಯಾಗಿ ರಕ್ಷಿಸುವೆನು ಎಂದು ಮೂಲತಃ ದೇವರೇ ಹೇಳುತ್ತಿದ್ದಾನೆ.

ಒಪ್ಪಂದ ವಾಗ್ದಾನದ ಅಂತಿಮ ಫಲಿತಾಂಶವೇನೆಂದರೆ, ಖಂಡಿತವಾಗಿಯೂ, ಹೊಸದಾಗಿ ಮಾಡಿದ ಜಗತ್ತಿನಲ್ಲಿ 'ನಿತ್ಯಜೀವವೇ' ಆಗಿದೆ, ಇಂದು ಒಪ್ಪಂದದ ಆಶೀರ್ವಾದಗಳನ್ನು ಆನಂದಿಸಲು ನಾವು ಆ ಸಮಯದವರೆಗೆ ಕಾಯಬೇಕಾಗಿಲ್ಲ. ದೇವರು ಇಂದು ನಮ್ಮ ಜೀವನದ ಬಗ್ಗೆ ಕಾಳಜಿವಹಿಸುತ್ತಾನೆ; ಆತನು ಇಂದು ನಮಗೆ ಉತ್ತಮವಾದದ್ದನ್ನು ಬಯಸುತ್ತಾನೆ. ಒಪ್ಪಂದ ಎಂದರೆ, ನೀವು ಇದನ್ನು ಇಲ್ಲಿ ಮಾಡಿರಿ, ನೀವು ಅದನ್ನು ಅಲ್ಲಿ ಮಾಡಿರಿ, ಬಹಳ ಸಮಯದ ನಂತರ, ನೀವು ನಿಮ್ಮ ಪ್ರತಿಫಲವನ್ನು ಪಡೆಯುತ್ತೀರಿ ಎಂದು ಹೇಳುವ ಯಾವುದೋ

* **ಈ ಪಾಠವನ್ನು ಜೂನ್ 26ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.**

ವ್ಯವಹಾರವಲ್ಲ. ಅವು ಪ್ರತಿಫಲಗಳು, ಉಡುಗೊರೆಗಳೇ ಆಗಿವೆ. ನಂಬಿಕೆಯ ಮೂಲಕ ಒಪ್ಪಂದದ ಸಂಬಂಧದೊಳಗೆ ಪ್ರವೇಶಿಸುವವರು ಈಗ, ಇಲ್ಲಿ ಆನಂದಿಸ–ಬಹುದಾದ ಆಶೀರ್ವಾದಗಳಾಗಿವೆ.

ಈ ವಾರದ ಪಾಠವು, ಒಪ್ಪಂದದ ಕುರಿತಾದ ನಮ್ಮ ಸರಣಿಗಳಲ್ಲಿ ಕೊನೆಯ ಪಾಠವಾಗಿದೆ, ಇದು ಈ ಕೆಲವು ತಕ್ಷಣದ ಆಶೀರ್ವಾದಗಳನ್ನು ನೋಡುತ್ತದೆ, ದೇವರ ಕೃಪೆಯಿಂದ ಬಂದ ಈ ಕೆಲವು ವಾಗ್ದಾನಗಳನ್ನು ನಮ್ಮ ಹೃದಯದೊಳಗೆ ಸುರಿಸಲಾಗಿದೆ, ಯಾಕೆಂದರೆ, ಆತನು ತಟ್ಟುವ ಶಬ್ದವನ್ನು ಕೇಳಿ, ನಾವು ಬಾಗಿಲನ್ನು ತೆರೆದಿದ್ದೇವೆ. ಸಹಜವಾಗಿ, ಈ ವಾರದಲ್ಲಿ ನಾವು ಮುಟ್ಟಬಹುದಾದ–ಕ್ಕಿಂತ ಹೆಚ್ಚಿನ ಆಶೀರ್ವಾದಗಳು ಇಲ್ಲಿವೆ. ಇದು ಪ್ರಾರಂಭ ಮಾತ್ರ, ಆರಂಭವಾದ ಯಾವುದೂ ನಿಶ್ಚಯವಾಗಿ ಅಂತ್ಯವಾಗುವುದಿಲ್ಲ.

**ಈ ವಾರದ ಪಕ್ಷಿನೋಟ:** ನಾವು ಯಾಕೆ ಸಂತೋಷವನ್ನು ಅನುಭವಿಸಬೇಕು? ನಾವು ಯಾವ ಆಧಾರದ ಮೇಲೆ ಆ ವಾಗ್ದಾನವನ್ನು ಪಡೆಯಬೇಕು? ಅಪರಾಧದ ಹೊರೆಯಿಂದ ನಮ್ಮನ್ನು ಮುಕ್ತಗೊಳಿಸಬೇಕಾದ ಒಪ್ಪಂದದ ಬಗ್ಗೆ ಏನು? ಹೊಸ ಹೃದಯವನ್ನು ಹೊಂದಿದ್ದೇವೆ ಎನ್ನುವುದರ ಅರ್ಥವೇನು?

**ಭಾನುವಾರ** **ಜೂನ್ 20**

## ಆನಂದ

**"ನಿಮ್ಮ ಆನಂದವು ಪರಿಪೂರ್ಣವಾಗಬೇಕೆಂದು ನಾವು ಈ ಮಾತುಗಳನ್ನು ಬರೆಯುತ್ತೇವೆ" (1 ಯೋಹಾನ 1:4).**

ಯೋಹಾನನು ಇಲ್ಲಿ ಬರೆದದ್ದನ್ನು ನೋಡಿರಿ. ಒಪ್ಪಂದದ ಜನರಾಗಿರುವ ನಾವು ಯಾವ ಒಂದು ದೊಡ್ಡ ಅನುಕೂಲಗಳನ್ನು ಹೊಂದಬೇಕು ಎಂಬುದನ್ನು ಕೆಲವು ಸರಳ ಮಾತಿನಲ್ಲಿ ಅವನು ವ್ಯಕ್ತಪಡಿಸಿದ್ದಾನೆ– ಮತ್ತು ಅದು ಆನಂದದ ವಾಗ್ದಾನವಾಗಿದೆ.

ಕ್ರೈಸ್ತರಾಗಿ ನಾವು ಭಾವನೆಯಿಂದ ಹೋಗಬಾರದೆಂದು ಆಗಾಗ್ಗೆ ಹೇಳಲಾಗಿದೆ. ನಂಬಿಕೆ ಎನ್ನುವುದು ಭಾವನೆಯಲ್ಲ, ಸತ್ಯವಾದವೆಲ್ಲವುಗಳಿಗಾಗಿ ನಾವು ನಮ್ಮ ಭಾವನೆಗಳನ್ನು ಮೀರಿ ಹೋಗಬೇಕಾಗಿದೆ. ಆದರೆ ಅದೇ ಸಮಯದಲ್ಲಿ, ನಾವು

ಅಭಿಪ್ರಾಯಗಳ, ಭಾವನೆಗಳ, ಮನೋಭಾವಗಳ ಜೀವಿಗಳಾಗದಿದ್ದರೆ, ನಾವು ಮನುಷ್ಯ ಜೀವಿಗಳಾಗಿರುವುದಿಲ್ಲ. ನಾವು ನಮ್ಮ ಅಭಿಪ್ರಾಯಗಳನ್ನು ತಳ್ಳಿಹಾಕಲು (ನಿರಾಕರಿಸಲು) ಸಾಧ್ಯವಿಲ್ಲ; ನಾವು ಎನು ಮಾಡಬೇಕೆಂದರೆ, ಅವುಗಳನ್ನು ಅರ್ಥಮಾಡಿಕೊಳ್ಳಬೇಕು, ಅವುಗಳಿಗೆ ಸರಿಯಾದ ಕಾರ್ಯಭಾರವನ್ನು ನೀಡಬೇಕು, ಸಾಧ್ಯವಾದಷ್ಟು ಅವುಗಳನ್ನು ಹತೋಟಿಯಲ್ಲಿ ಇಟ್ಟುಕೊಂಡಿರಬೇಕು. ಆದರೆ ಅವುಗಳನ್ನು ತಳ್ಳಿಹಾಕುವುದೆಂದರೆ ಮನುಷ್ಯರಾಗಿದ್ದೇವೆಂಬುದನ್ನು ತಳ್ಳಿಹಾಕುವುದಾಗಿದೆ (ವೃತ್ತವು ದುಂಡಾಗಿರಬಾರದು ಎಂದು ಸಹ ನಾವು ಹೇಳಬಹುದು). ನಿಜವಾಗಿ, ಈ ವಚನ ಹೇಳಿದಂತೆಯೇ, ನಾವು ಭಾವನೆಗಳನ್ನು (ಈ ಸಂದರ್ಭದಲ್ಲಿ ಆನಂದ) ಹೊಂದಿರುವುದು ಮಾತ್ರವಲ್ಲದೆ, ಅವುಗಳೂ ಸಹ ಪೂರ್ಣವಾಗಿರಬೇಕು. ಭಾವನೆಗಳನ್ನು ನಿರಾಕರಿಸಿದಾಗ, ಅವು ಅಷ್ಟೇನೂ ಅನಿಸುವುದಿಲ್ಲ, ಹೌದಲ್ಲವೇ?

**ಅಧ್ಯಾಯದ ಆರಂಭದಲ್ಲಿ ಪ್ರಾರಂಭವಾಗುವ ಮೇಲಿನ ವಚನದ ಸನ್ನಿವೇಶವನ್ನು ಓದಿರಿ. ಅವರ ಆನಂದವು ಪರಿಪೂರ್ಣವಾಗುತ್ತದೆ ಎಂಬ ಅವನು ಭರವಸೆಯಿಟ್ಟ ಮೇರೆಗೆ ಯೋಹಾನನು ಆರಂಭಿಕ ಕ್ರೈಸ್ತರಿಗೆ ಏನು ಬರೆಯುತ್ತಿದ್ದಾನೆ? ಮತ್ತು ಅದು ಅವರಿಗೆ ಆನಂದವನ್ನು ಯಾಕೆ ನೀಡಬೇಕು?**

ನಿಜವಾದ ಹನ್ನೆರಡರ ಬಳಗದಲ್ಲಿ ಯೋಹಾನನು ಒಬ್ಬನು ಅವನು ಕ್ರಿಸ್ತನ ಮೂರೂವರೆ ವರ್ಷಗಳ ಧರ್ಮಪ್ರಚಾರ ಸೇವೆಯ ಪ್ರಾರಂಭದಿಂದಲೂ ಯೇಸುವಿನ ಜೀವನದ ಕೆಲವು ಅದ್ಭುತ ಘಟನೆಗಳಿಗೆ ಸಾಕ್ಷಿಯಾಗಿದ್ದಾನೆ (ಯೋಹಾನನು ಶಿಲುಬೆಯ ಬಳಿ, ಗೆತ್ಸೇಮನೆ ಬಳಿ ಮತ್ತು ಯೇಸು ಪ್ರಕಾಶರೂಪವುಳ್ಳವನಾಗಿದ್ದ ಸ್ಥಳದ ಬಳಿಯೂ ಸಹ ಇದ್ದನು). ಅವನು ಪ್ರತ್ಯಕ್ಷದರ್ಶಿಯಾದ ಕಾರಣದಿಂದ, ಅವನು ಖಂಡಿತವಾಗಿಯೂ ಈ ವಿಷಯದ ಬಗ್ಗೆ ಮಾತನಾಡಲು ಅರ್ಹನಾಗಿದ್ದಾನೆ.

ಆದರೂ, ಅವನು ತನಗೆ ತಾನೇ ಒತ್ತು ನೀಡುತ್ತಿಲ್ಲವೆಂಬುದನ್ನೂ ಸಹ ಗಮನಿಸಿ. ಇದು ಯೇಸು ಶಿಷ್ಯರಿಗಾಗಿ ಏನು ಮಾಡಿದ್ದಾನೆ ಎಂಬುದರ ಮೇಲೆ ಒತ್ತು ನೀಡುವ ಕಾರಣ ಅವರು ಒಬ್ಬರಿಗೊಬ್ಬರು ಮಾತ್ರವಲ್ಲದೆ ದೇವರೊಂದಿಗೂ

ಸಹ ಒಡನಾಟವನ್ನು ಈಗ ಹೊಂದಬಹುದಾಗಿತ್ತು. ನಾವು ದೇವರೊಂದಿಗೆ ಈ ನಿಕಟ ಸಂಬಂಧದೊಳಗೆ ಪ್ರವೇಶಿಸಲು ಯೇಸು ಮಾರ್ಗವನ್ನು ತೆರೆದಿದ್ದಾನೆ; ಈ ಒಡನಾಟ, ಈ ಸಂಬಂಧದ ಒಂದು ಫಲಿತಾಂಶವೆಂದರೆ– ಅದುವೇ ಆನಂದ. ಯೇಸುವಿನ ಬಗ್ಗೆ ಅವರು ಕೇಳಲ್ಪಟ್ಟದ್ದು ಸತ್ಯವೆಂದು ಅವರು ಅರಿತುಕೊಳ್ಳಬೇಕೆಂದು ಯೋಹಾನ ಬಯಸಿದನು (ಅವನು ಆತನನ್ನು ನೋಡಿದ್ದಾನೆ, ಮುಟ್ಟಿದ್ದಾನೆ, ಅನುಭವಿಸಿದ್ದಾನೆ ಮತ್ತು ಕೇಳಿಸಿಕೊಂಡಿದ್ದಾನೆ). ಆ ಕಾರಣದಿಂದ ಅವರು ಕೂಡ, ತಮ್ಮನ್ನು ಪ್ರೀತಿಸುವ ಮತ್ತು ತಮಗಾಗಿ ತನ್ನ ಮಗನ ಮೂಲಕ ತನ್ನನ್ನು ತಾನೇ ನೀಡಿದ ಅವರ ಪರಲೋಕ ತಂದೆಯೊಂದಿಗೆ ಆನಂದಪೂರ್ಣ ಸಂಬಂಧದಲ್ಲಿ ಪ್ರವೇಶಿಸಬಹುದಾಗಿತ್ತು.

ಒಂದು ನಿರ್ದಿಷ್ಟ ಅರ್ಥದಲ್ಲಿ ಯೋಹಾನನು ತನ್ನದೇ ಆದ ಸಾಕ್ಷಿಯನ್ನು ನೀಡುತ್ತಿದ್ದಾನೆ. ಯೇಸುವಿನೊಂದಿಗಿನ ನಿಮ್ಮ ಸಂಬಂಧದ ಕುರಿತಾಗಿ ನಿಮ್ಮ ಸ್ವಂತ ಸಾಕ್ಷಿಯೇನು? ಯೋಹಾನನು ಇಲ್ಲಿ ಮಾಡಲು ಯತ್ನಿಸುತ್ತಿದ್ದ ಹಾಗೆಯೇ, ಬೇರೊಬ್ಬರ ಆನಂದವನ್ನು ಹೆಚ್ಚಿಸಲು ನೀವೇನು ಹೇಳಬಹುದು?

**ಸೋಮವಾರ** **ಜೂನ್ 21**

## ಅಪರಾಧ ಮುಕ್ತ

"ಆದುದರಿಂದ ಕ್ರಿಸ್ತ ಯೇಸುವಿನಲ್ಲಿ ಇರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ". ಶರೀರಭಾವದವರಾಗಿ ನಡೆಯದೆ ಪವಿತ್ರಾತ್ಮಭಾವದವರಾಗಿ ನಡೆಯುವವರಾಗಿದ್ದಾರೆ" (ರೋಮಾ 8:1).

ಒಬ್ಬ ಯುವತಿಯನ್ನು ದಾರುಣವಾಗಿ ಹತ್ಯೆಗೈಯ್ಯಲಾಗಿದೆ. ಆಕೆಯನ್ನು ಕೊಂದ ಕೊಲೆಗಾರ ತಿಳಿದಿಲ್ಲ. ಆಕೆಯ ಸಮಾಧಿಯಲ್ಲಿ ಗುಪ್ತ ಮೈಕ್ರೋಫೋನ್ ಇಟ್ಟು ಪೊಲೀಸರು ಕೊಲೆಗಾರನಿಗೆ ಬಲೆ ಬೀಸಿದರು. ಆಕೆಯ ಸಾವಿನ ಹಲವು ತಿಂಗಳ ನಂತರ, ಒಬ್ಬ ಯುವಕ ಸಮಾಧಿಯ ಬಳಿಗೆ ಬಂದನು, ಮಂಡಿಯೂರಿ ಅಳುತ್ತಾ, ಕ್ಷಮಾಪಣೆಗಾಗಿ ಮಹಿಳೆಯನ್ನು ಬೇಡಿಕೊಂಡನು. ಪೊಲೀಸರು ಖಂಡಿತವಾಗಿಯೂ ಅವನ ಮಾತುಗಳನ್ನು ಮೇಲ್ವಿಚಾರಣೆ ಮಾಡುತ್ತಿದ್ದರು, ಆ ಅಪರಾಧಕ್ಕಾಗಿ ಅವನನ್ನು ಬಂಧಿಸಿದರು.

ಆ ವ್ಯಕ್ತಿಯನ್ನು ಸಮಾಧಿ ಕಡೆಗೆ ಸೆಳೆದದ್ದು ಯಾವುದು? ಅದು ಅಪರಾಧ (ನಾವು ಭಾವಿಸುತ್ತೇವೆ) ಖಂಡಿತವಾಗಿಯೂ, ನಮ್ಮಲ್ಲಿ ಯಾರೂ ಆ ಯುವಕ ಮಾಡಿದಷ್ಟು ಕೆಟ್ಟದ್ದನ್ನು ಮಾಡಿಲ್ಲವಾದರೂ, ನಾವೆಲ್ಲರೂ ತಪ್ಪಿತಸ್ಥರೇ; ನಾವೇ ನಾಚಿಕೆಪಡುವಂತ ಕೆಲಸಗಳನ್ನು ನಾವು ಮಾಡಿದ್ದೇವೆ, ನಾವು ಅಂತಹ ಕೆಲಸಗಳನ್ನು ಬಿಟ್ಟುಬಿಡಲು ಆಶಿಸುತ್ತೇವೆ. ಆದರೆ ಸಾಧ್ಯವಾಗುತ್ತಿಲ್ಲ.

ಯೇಸುವಿಗೂ ಮತ್ತು ಹೊಸ ಒಪ್ಪಂದದ ರಕ್ತಕ್ಕೂ ಧನ್ಯವಾದಗಳು, ನಮ್ಮಲ್ಲಿ ಯಾರೂ ಅಪರಾಧದ ಕಳಂಕದ ಅಡಿಯಲ್ಲಿ, ಬದುಕಬೇಕಾಗಿಲ್ಲ; ಈ ದಿನದ ವಚನದ ಪ್ರಕಾರ ನಮ್ಮ ವಿರುದ್ಧ ಯಾವ ಅಪರಾಧ ನಿರ್ಣಯ ಇರುವುದೇ ಇಲ್ಲ. ಅಂತಿಮ ನ್ಯಾಯಾಧೀಶನು ನಮ್ಮನ್ನು ತಪ್ಪಿತಸ್ಥರೆಂದು ಪರಿಗಣಿಸುತ್ತಾನೆ, ನಾವು ತಪ್ಪಿತಸ್ಥರೆಂದು ಭಾವಿಸುವ ಕೆಲಸಗಳನ್ನು ನಾವು ಮಾಡೇ ಇಲ್ಲ ಎಂಬಂತೆ ಎಣಿಸುತ್ತಾನೆ.

**ರೋಮಾ 8:1ನ್ನು ಅರ್ಥಮಾಡಿಕೊಳ್ಳಲು ಈ ವಚನಗಳು ನಮಗೆ ಹೇಗೆ ಸಹಾಯ ಮಾಡುತ್ತದೆ? ಯೋಹಾನ 5:24; ರೋಮಾ 3:24,25; 2 ಕೊರಿಂಥ 5:21.**

ದೇವರೊಂದಿಗಿನ ಒಪ್ಪಂದದ ಸಂಬಂಧದಲ್ಲಿ ಬದುಕುವ ಒಂದು ದೊಡ್ಡ ವಾಗ್ದಾನ ಎಂದರೆ ನಾವು ಇನ್ನು ಮುಂದೆ ಅಪರಾಧ ನಿರ್ಣಯದಡಿಯಲ್ಲಿ ಬದುಕಬೇಕಾಗಿಲ್ಲ. ಒಪ್ಪಂದದ ರಕ್ತದಿಂದಾಗಿ, ನಾವು ದೇವರೊಂದಿಗಿನ ಒಪ್ಪಂದದ ಸಂಬಂಧದೊಳಗೆ ಪ್ರವೇಶಿಸಲು ಆರಿಸಿಕೊಂಡಿದ್ದೇವೆ, ಯಾರು ನಂಬಿಕೆ, ಪಶ್ಚಾತ್ತಾಪ, ವಿಧೇಯತೆ ಎಂಬ ಷರತ್ತುಗಳಿಗೆ ಬದ್ಧರಾಗಿರಲು ಆಯ್ಕೆ ಮಾಡಿಕೊಳ್ಳುವವರು ಅಪರಾಧ ನಿರ್ಣಯವನ್ನು ತೆಗೆದುಹಾಕಬಹುದು. ನಾವು ದುಷ್ಟರು, ನಾವು ಕೆಟ್ಟವರು, ದೇವರಿಂದ ಅಂಗೀಕರಿಸಲ್ಪಡದಷ್ಟು ನಾವು ಪಾಪಿಗಳು ಎಂದು ಸೈತಾನನು ನಮ್ಮ ಕಿವಿಗಳಲ್ಲಿ ಪಿಸುಗುಟ್ಟಲು ಪ್ರಯತ್ನಿಸುವಾಗ, ಯೇಸು ಅರಣ್ಯದಲ್ಲಿ ಸೈತಾನನ ಶೋಧನೆಗೆ ಒಳಗಾದಾಗ ಆತನು ಏನು ಮಾಡಿದನೋ, ಅದನ್ನೇ ನಾವು ಮಾಡಬಹುದು; ನಾವು ಧರ್ಮಗ್ರಂಥವನ್ನು ಉಲ್ಲೇಖಿಸಬಹುದು, ಮತ್ತು ಉಲ್ಲೇಖಿಸುವುದಕ್ಕೆ ಎಲ್ಲಕ್ಕಿಂತ ಉತ್ತಮ ವಾಕ್ಯವೆಂದರೆ ರೋಮಾ 8:1.

ನಮ್ಮ ಜೀವನದಲ್ಲಿರುವ ಪಾಪದ ನಿಜಸ್ಥಿತಿಯನ್ನು ನಿರಾಕರಿಸುವುದು ಎಂದಲ್ಲ; ಬದಲಾಗಿ, ಇದರ ಅರ್ಥ, ನಾವು ದೇವರೊಂದಿಗಿನ ಒಪ್ಪಂದದ ಸಂಬಂಧದಿಂದಾಗಿ, ಇನ್ನು ಮುಂದೆ ಆ ಅಪರಾಧ ನಿರ್ಣಯದಡಿಯಲ್ಲಿ ಬದುಕುವುದಿಲ್ಲ. ಯೇಸು ನಮಗಾಗಿ ದಂಡವನ್ನು ಕಟ್ಟಿದ್ದಾನೆ, ಮತ್ತು ಆತನು ಈಗ ತಂದೆಯಾದ ದೇವರ ಸಮ್ಮುಖದಲ್ಲಿ ತನ್ನ ಸ್ವಂತ ರಕ್ತದೊಂದಿಗೆ ನಮ್ಮ ಪರವಾಗಿ ಬೇಡಿಕೊಳ್ಳುತ್ತಾ ನಿಂತಿದ್ದಾನೆ, ನಮ್ಮ ಪಾಪಗಳ ಬದಲಾಗಿ ತನ್ನ ಸ್ವಂತ ನೀತಿಯನ್ನು ಪ್ರಸ್ತುತಪಡಿಸುತ್ತಿದ್ದಾನೆ.

ನೀವು ಯಾವುದೇ ರೀತಿಯ ಪಾಪ ಮಾಡಿರಬಹುದು, ದೇವರು ನಿಮಗೆ ಪಾಪ ಕ್ಷಮಾಪಣೆ ನೀಡಿದ್ದಾನೆಂದರೆ ನಿಮ್ಮ ಜೀವನದಲ್ಲಿ ಅದು ಯಾವ ರೀತಿಯ ವ್ಯತ್ಯಾಸವನ್ನು ಮಾಡುತ್ತದೆ? ನಿಮ್ಮ ವಿರುದ್ಧವಾಗಿ ಪಾಪ ಮಾಡಿದ ಇತರರೊಂದಿಗೆ ವ್ಯವಹರಿಸಲು ಆ ವಾಸ್ತವತೆಯು ನಿಮಗೆ ಹೇಗೆ ಸಹಾಯ ಮಾಡುತ್ತದೆ? ಆ ಜನರೊಂದಿಗೆ ನೀವು ವ್ಯವಹರಿಸುವ ವಿಧಾನದ ಮೇಲೆ ಅದು ಹೇಗೆ ಪರಿಣಾಮ ಬೀರಬಹುದು?

**ಮಂಗಳವಾರ** **ಜೂನ್ 22**

## ಹೊಸ ಒಪ್ಪಂದ ಮತ್ತು ಹೊಸ ಹೃದಯ

"ಕ್ರಿಸ್ತನು ನಿಮ್ಮ ನಂಬಿಕೆಯ ಮೂಲಕ ನಿಮ್ಮ ಹೃದಯಗಳಲ್ಲಿ ವಾಸ ಮಾಡುವ ಹಾಗೆಯೂ ಆತನು ತನ್ನ ಮಹಿಮಾತಿಶಯದ ಪ್ರಕಾರ ಅನುಗ್ರಹಿಸಲಿ; ನೀವು ದೇವರ ಪ್ರೀತಿಯಲ್ಲಿ ನೆಲೆಗೊಂಡು ನಿಂತು ಅದರ ಅಗಲ ಉದ್ದ ಎತ್ತರ ಆಳ ಎಷ್ಟೆಂಬುದನ್ನು ದೇವಜನರೆಲ್ಲರೊಂದಿಗೆ ಗ್ರಹಿಸಲೂ ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳುಕೊಳ್ಳಲೂ ಪೂರ್ಣಶಕ್ತರಾಗಿದ್ದು ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾಗುವ ಹಾಗೆ ನಿಮಗೆ ದಯಪಾಲಿಸಲಿ ಎಂದು ಆತನನ್ನು ಬೇಡಿಕೊಳ್ಳುತ್ತೇನೆ" (ಎಫೆಸ 3:17–19).

ಈ ತ್ರೈಮಾಸಿಕದಲ್ಲಿ ಹಿಂದಿನ ಅಧ್ಯಯನಗಳು ತೋರಿಸಿಕೊಟ್ಟಂತೆ ಯೆಹೋವನು ಹೊಸ ಒಡಂಬಡಿಕೆ ಧರ್ಮೋಪದೇಶವನ್ನು ನಮ್ಮ ಹೃದಯಗಳಲ್ಲಿ ಇಡುವನು (ಯೆರೆಮೀಯ 31:31–33). ಆದರೆ ಈ ದಿನದ ವಾಕ್ಯಗಳ ಪ್ರಕಾರ

ಧರ್ಮೋಪದೇಶ ಮಾತ್ರವಲ್ಲದೆ ಕ್ರಿಸ್ತನೂ ಸಹ ಇದ್ದಾನೆ, ಖಂಡಿತವಾಗಿಯೂ ಕ್ರಿಸ್ತನು ಮತ್ತು ಆತನ ಧರ್ಮೋಪದೇಶ ನಿಕಟ ಸಂಪರ್ಕ ಹೊಂದಿರುವುದು, ಒಳ್ಳೆಯ ಅರ್ಥವನ್ನು ನೀಡುತ್ತದೆ. ಹೀಗೆ ನಮ್ಮ ಹೃದಯಗಳಲ್ಲಿ ಕ್ರೈಸ್ತರ ಧರ್ಮೋಪದೇಶದೊಂದಿಗೆ ಕ್ರಿಸ್ತನು ಕೂಡ ವಾಸಿಸುತ್ತಾನೆ (ಮೇಲಿನ ವಾಕ್ಯದಲ್ಲಿ ಅನುವಾದಿಸಲಾದ ಗ್ರೀಕ್‌ಪದ "ವಾಸಿಸು" ಎಂದರೆ "ನೆಲೆಗೊಳ್ಳು" ಎಂದರ್ಥ, ಖಾಯಂ ಇರುವ ಕಲ್ಪನೆಯನ್ನು ನೀಡುತ್ತದೆ), ನಾವು ಮತ್ತೊಂದು ಶ್ರೇಷ್ಠ ಒಪ್ಪಂದದ ಪ್ರಯೋಜನಗಳ ಕಡೆಗೆ ಬರುತ್ತೇವೆ– ಅದುವೇ ಹೊಸ ಹೃದಯ.

**ನಮಗೆ ಹೊಸ ಹೃದಯ ಏಕೆ ಬೇಕು? ಹೊಸ ಹೃದಯವನ್ನು ಹೊಂದಿದವರಲ್ಲಿ ಯಾವ ಬದಲಾವಣೆಗಳು ಪ್ರಕಟಗೊಳ್ಳುತ್ತವೆ?**

ಈ ದಿನದ ವಾಕ್ಯವನ್ನು ಮತ್ತೊಮ್ಮೆ ಓದಿರಿ. ಪೌಲನು ಪ್ರೀತಿಯ ಅಂಶವನ್ನು ಒತ್ತಿಹೇಳುತ್ತಿದ್ದಾನೆ, ಅದರಲ್ಲಿ ನಾವು "ಬೇರೂರಿರಬೇಕು ಮತ್ತು ಆಧಾರವಾಗಿರಬೇಕು" ಎಂದು ಹೇಳುವುದನ್ನು ಗಮನಿಸಿರಿ. ಈ ಮಾತುಗಳು ಪ್ರೀತಿಯ ಅಡಿಪಾಯದಲ್ಲಿ ಸ್ಥಿರತೆ, ದೃಢತೆ ಮತ್ತು ಶಾಶ್ವತತೆಯನ್ನು ಸೂಚಿಸುತ್ತವೆ. ನಮ್ಮ ನಂಬಿಕೆಯು ದೇವರಿಗಾಗಿ ಇರುವ ಪ್ರೀತಿ ಮತ್ತು ಮನುಷ್ಯಗೋಸ್ಕರ ಇರುವ ಪ್ರೀತಿಯಲ್ಲಿ ಬೇರೂರಿಲ್ಲವೆಂದರೆ ಅದು ವ್ಯರ್ಥ (ಮತ್ತಾಯ 22:37–39, 1 ಕೊರಿಂಥ 13). ಈ ಪ್ರೀತಿ ವಸ್ತುವಿಲ್ಲದ ಸ್ಥಳದಲ್ಲಿ ಬರುವುದಿಲ್ಲ. ಇದಕ್ಕೆ ತದ್ವಿರುದ್ಧವಾಗಿ ಇದು ಬರುತ್ತದೆ. ಯಾಕೆಂದರೆ ಯೇಸುವಿನ ಮೂಲಕ ವ್ಯಕ್ತವಾಗುತ್ತಿದ್ದಂತೆ, ನಮಗೋಸ್ಕರವಾಗಿ ಇರುವ ದೇವರ ಪ್ರೀತಿಯ (ತಿಳುವಳಿಕೆಯನ್ನು ಹಾದುಹೋಗುವ ಪ್ರೀತಿ) ಮಿನುಗು ನೋಟವನ್ನು ನಾವು ಪಡೆಯುತ್ತೇವೆ. ಇದರ ಪರಿಣಾಮವಾಗಿ, ಆತನು ನಮ್ಮಲ್ಲಿ ಕೆಲಸ ಮಾಡುವುದರಿಂದ, ನಮ್ಮ ಜೀವನವು ಬದಲಾಗುತ್ತದೆ, ನಮ್ಮ ಹೃದಯಗಳು ಬದಲಾಗುತ್ತದೆ, ಮತ್ತು ನಾವು ಹೊಸ ಆಲೋಚನೆಗಳು, ಹೊಸ ಬಯಕೆಗಳು, ಮತ್ತು ಹೊಸ ಗುರಿಗಳನ್ನು ಪಡೆದಿರುವ ಹೊಸ ಜನರಾಗುತ್ತೇವೆ. ನಮಗಾಗಿ ಇರುವ ದೇವರ ಪ್ರೀತಿಗೆ ನಮ್ಮ ಪ್ರತಿಕ್ರಿಯೆಯು, ನಮ್ಮ ಹೃದಯಗಳನ್ನು ಬದಲಾಯಿಸಿ ಇತರರಿಗಾಗಿ ನಮ್ಮಲ್ಲಿ ಪ್ರೀತಿಮೂಡಿಸಲು ಆತನನ್ನು ಶಕ್ತಿಗೊಳಿಸುತ್ತದೆ

**1 ಯೋಹಾನ 4:16 ಓದಿರಿ. ಪೌಲನು ಎಫೆಸ 3:17–19ರಲ್ಲಿ ಬರೆಯಲಾದ ವಿಷಯಕ್ಕೆ ಈ ವಚನವು ಹೇಗೆ ಸಂಬಂಧಿಸಿದೆ?**

**ಇಂದು ನಾವು ಅಧ್ಯಯನ ಮಾಡಿದ ವಚನಗಳನ್ನು ನೋಡೋಣ. ಈ ವಾಕ್ಯಗಳ ವಾಗ್ದಾನಗಳು ನಿಮ್ಮಲ್ಲಿ ನೆರವೇರಲು ನೀವು ಏನು ಮಾಡುತ್ತೀರಿ? ಬಹುಶಃ ದೇವರ ಸಂಪೂರ್ಣತೆಯನ್ನು ಅನುಭವಿಸುವುದರಿಂದ ನಿಮ್ಮನ್ನು ಅಡ್ಡಿಪಡಿಸುತ್ತಿರುವ ಸಂಗತಿಗಳನ್ನು ನೀವು ಬದಲಾಯಿಸಬೇಕಾಗಿದೆಯೇ? (ಎಫೆಸ 3:19) ನಿಮ್ಮ ಜೀವನದಲ್ಲಿ ನೀವು ಯಾವ ಬದಲಾವಣೆಗಳನ್ನು ಮಾಡಬೇಕಾಗಿದೆ ಎಂಬುದನ್ನು ಪಟ್ಟಿ ಮಾಡಿ. ಸ್ವತಃ ನಿಮಗಾಗಿ ಒಂದನ್ನು ಮಾಡಿಕೊಳ್ಳಿ, ನಿಮಗೆ ಹಿತಕರವಾಗಿದ್ದರೆ, ತರಗತಿಯೊಂದಿಗೆ ಹಂಚಿಕೊಳ್ಳಬಹುದಾದಂತ ಒಂದನ್ನು ಮಾಡಿರಿ. ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳಲು ನೀವು ಪರಸ್ಪರ ಒಬ್ಬರಿಗೊಬ್ಬರು ಹೇಗೆ ಸಹಾಯಮಾಡಿಕೊಳ್ಳಬಹುದು?**

**ಬುಧವಾರ** **ಜೂನ್ 23**

## ಹೊಸ ಒಪ್ಪಂದ ಮತ್ತು ನಿತ್ಯಜೀವ

"ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು; ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವುದಿಲ್ಲ" (ಯೋಹಾನ 11:25,26).

ನಿತ್ಯಜೀವನಕ್ಕೆ ಎರಡು ಆಯಾಮಗಳಿವೆ. ಪ್ರಸ್ತುತ ಆಯಾಮವು ವಿಶ್ವಾಸಿಗೆ ಈಗ ಸಮೃದ್ಧಿ ಜೀವನದ ಅನುಭವವನ್ನು ತರುತ್ತದೆ (ಯೋಹಾನ 10:10). ಇಂದು ನಮ್ಮ ಜೀವನಕ್ಕಾಗಿ ನಮಗೆ ನೀಡಲಾಗಿರುವ ಅನೇಕ ವಾಗ್ದಾನಗಳನ್ನು ಇದು ಒಳಗೊಂಡಿದೆ.

ಭವಿಷ್ಯದ ಆಯಾಮವು, ಖಂಡಿತವಾಗಿಯೂ ನಿತ್ಯಜೀವವಾಗಿದೆ– ದೇಹದ ಪುನರುತ್ಥಾನದ ವಾಗ್ದಾನ (ಯೋಹಾನ 5:28, 29; ಯೋಹಾನ 6:39). ಆದರೂ ಅದು ಇನ್ನೂ ಭವಿಷ್ಯದಲ್ಲಿದ್ದರೂ, ಆ ಒಂದು ಘಟನೆಯು ಮಿಕ್ಕೆಲ್ಲವುಗಳಿಗಿಂತ ಯೋಗ್ಯವಾಗಿದೆ, ಆ ಒಂದು ಘಟನೆಯು ಕ್ರೈಸ್ತರಾಗಿ ನಮ್ಮೆಲ್ಲಾ ಭರವಸೆಗಳನ್ನು ಕಾಪಾಡುತ್ತದೆ.

**ಈ ದಿನಕ್ಕಾಗಿ ವಚನವನ್ನು ಅಧ್ಯಯನ ಮಾಡಿರಿ. ಯೇಸು ಇಲ್ಲಿ ಏನು ಹೇಳುತ್ತಿದ್ದಾನೆ? ನಿತ್ಯಜೀವ ಎಲ್ಲಿ ಸಿಗುತ್ತದ್? ಆತನಲ್ಲಿ ಬದುಕುತ್ತಾ ನಂಬುವವರು ಸತ್ತರೂ ಬದುಕುವರು ಎಂಬ ಆತನ ಮಾತುಗಳನ್ನು ನಾವು ಹೇಗೆ ಅರ್ಥ ಮಾಡಿಕೊಳ್ಳುತ್ತೇವೆ?** (ಪ್ರಕ 2:11; ಪ್ರಕ 20:6,14 ಮತ್ತು ಪ್ರಕ 21:18).

ಸಹಜವಾಗಿ, ನಾವೆಲ್ಲರೂ ಸಾಯುತ್ತೇವೆ, ಆದರೆ ಯೇಸುವಿನ ಪ್ರಕಾರ, ಈ ಸಾವು ಕೇವಲ ನಿದ್ರೆಯಾಗಿದೆ, ತಾತ್ಕಾಲಿಕ ವಿರಾಮವಾಗಿದೆ, ಆತನಲ್ಲಿ ನಂಬಿಕೆ ಇಡುವವರು ಸಿಗುತ್ತದೆ. ಜೀವಕ್ಕಾಗಿ ಇರುವ ಪುನರುತ್ಥಾನದಲ್ಲಿ ಕೊನೆಗೊಳ್ಳುತ್ತಾರೆ. ಕ್ರಿಸ್ತನು ಮರಳಿದಾಗ, ಕ್ರಿಸ್ತನಲ್ಲಿ ಸತ್ತವರು ಅಮರರಾಗಿ ಎದ್ದೇಳುವರು, ಮತ್ತು ಕ್ರಿಸ್ತನ ಜೀವಂತ ಅನುಯಾಯಿಗಳು ಕಣ್ಣುರೆಪ್ಪೆ ಬಡಿಯುವಷ್ಟರೊಳಗೆ, ಅಮರತ್ವಕ್ಕೆ ಬದಲಾಗುತ್ತಾರೆ. ಕ್ರಿಸ್ತನಲ್ಲಿದ್ದ ಸತ್ತವರು ಮತ್ತು ಜೀವಂತರಿಬ್ಬರೂ ಒಂದೇ ರೀತಿಯ ಪುನರುತ್ಥಾನದ ದೇಹಗಳನ್ನು ಹೊಂದಿರುತ್ತಾರೆ. ಆ ಸಮಯದಲ್ಲಿ ದೇವರ ಜನರಿಗಾಗಿ ಅಮರತ್ವವು ಆರಂಭವಾಗುತ್ತದೆ.

ನಮ್ಮ ಅಂತ್ಯವು ಸಮಾಧಿಯಲ್ಲಿ ಇಲ್ಲ ಆದರೆ ಸದಾಕಾಲವೂ ಶಾಶ್ವತವಾಗಿರುವ ಹೊಸ ಜೀವನವನ್ನು ನಾವು ಹೊಂದಿದ್ದೇವೆ. ಅದಕ್ಕೆ ಅಂತ್ಯವೇ ಇಲ್ಲ ಎಂದು ತಿಳಿಯುವುದು ಎಷ್ಟು ದೊಡ್ಡ ಸಂತೋಷವಾಗಿದೆ.

"ನಾವು ಆತನೊಂದಿಗೆ ಒಂದೇ ಆತ್ಮವಾಗಬೇಕೆಂಬ ಸಲುವಾಗಿ ಕ್ರಿಸ್ತನು ನಮ್ಮೊಂದಿಗೆ ಒಂದೇ ದೇಹವಾದನು. ಈ ಐಕ್ಯತೆಯ ಸದ್ಗುಣದಿಂದಾಗಿ ನಾವು ಸಮಾಧಿಯಿಂದ ಹೊರಬಂದಿದ್ದೇವೆ– ಕೇವಲ ಕ್ರಿಸ್ತನ ಶಕ್ತಿಯ ಕಾಣಿಸಿಕೊಳ್ಳುವಿಕೆ ಇಂದಲ್ಲ, ಆದರೆ ನಂಬಿಕೆಯ ಮೂಲಕ ಆತನ ಜೀವನ ನಮ್ಮದಾಗಿದೆ. ಕ್ರಿಸ್ತನನ್ನು ಆತನ ನಿಜವಾದ ಪಾತ್ರದಲ್ಲಿ ನೋಡುವವರು ಆತನನ್ನು ಹೃದಯದೊಳಕ್ಕೆ ಸ್ವೀಕರಿಸುತ್ತಾರೆ, ನಿತ್ಯಜೀವವನ್ನು ಹೊಂದಿಕೊಳ್ಳುತ್ತಾರೆ. ಆತ್ಮನ ಮೂಲಕ ಕ್ರಿಸ್ತನು ನಮ್ಮಲ್ಲಿ ವಾಸಿಸುತ್ತಾನೆ; ದೇವರಾತ್ಮನನ್ನು ನಂಬಿಕೆಯ ಮೂಲಕ ಹೃದಯಕ್ಕೆ ಸ್ವೀಕರಿಸಲಾಗುತ್ತದೆ, ಅದು ನಿತ್ಯಜೀವದ ಪ್ರಾರಂಭವಾಗಿದೆ" – ಎಲೆನ್ ಜಿ ವೈಟ್, ದಿ ಡಿಸೈರ್ ಆಫ್ ಏಜಸ್, ಪುಟ 388.

ನಿತ್ಯಜೀವದ ಪ್ರಯೋಜನಗಳನ್ನು ಈಗ ನಾವು ಯಾವ ರೀತಿಯಲ್ಲಿ

ಆನಂದಿಸಬಹುದು? ಬೇರೆ ಮಾತಿನಲ್ಲಿ ಹೇಳುವುದಾದರೆ, ಈ ವಾಗ್ದಾನ ಇಂದು ನಮಗೆ ಏನು ಮಾಡುತ್ತದೆ? ನಿತ್ಯಜೀವದ ಈ ವಾಗ್ದಾನವು ವೈಯಕ್ತಿಕವಾಗಿ, ನಿಮ್ಮ ದೈನಂದಿನ ಜೀವನದಲ್ಲಿ ನಿಮಗೆ ನೀಡುವ ಕೆಲವು ಪ್ರಯೋಜನಗಳನ್ನು ಬರೆಯಿರಿ. ಈ ನಿರೀಕ್ಷೆ ಮತ್ತು ವಾಗ್ದಾನವನ್ನು ಬಹುಶಃ ಪ್ರೀತಿಪಾತ್ರರ ಸಾವಿನೊಂದಿಗೆ ಬಳಲುತ್ತಿರುವ ವ್ಯಕ್ತಿಗಳೊಂದಿಗೆ ಹಂಚಿಕೊಳ್ಳಲು ನೀವು ಅದನ್ನು ಹೇಗೆ ತೆಗೆದುಕೊಂಡು ಹೋಗುವಿರಿ?

**ಗುರುವಾರ** **ಜೂನ್ 24**

## ಹೊಸ ಒಪ್ಪಂದ ಮತ್ತು ಧರ್ಮಪ್ರಚಾರ ಕಾರ್ಯ

**"ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು"** (ಮತ್ತಾಯ 28:19,20).

ದಕ್ಷಿಣ ಆಫ್ರಿಕಾದ ಬರಹಗಾರನಾದ ಲಾರೆನ್ಸ್ ವ್ಯಾನ್‌ಡೆರ್‌ನ "ಅರ್ಥಹೀನತೆಯ ಹೊರೆ" ಎಂದು ಕರೆಯಲ್ಪಡುವ ಬರಹದೊಂದಿಗೆ ಪ್ರಪಂಚದಾದ್ಯಂತ ಜನರು ಆಗಾಗ ಹೆಣಗಾಡುತ್ತಿದ್ದರು. ಜೀವದ ವರದೊಂದಿಗೆ ಜನರು ತಮ್ಮನ್ನು ತಾವೇ ಕಂಡುಕೊಳ್ಳುತ್ತಾರೆ, ಆದರೂ, ಅವರು ಅದರೊಂದಿಗೆ ಏನು ಮಾಡಬೇಕೆಂಬುದನ್ನು ಅರಿತಿಲ್ಲ, ಈ ವರದ ಉದ್ದೇಶವೇನೆಂಬುದನ್ನು ತಿಳಿದುಕೊಂಡಿಲ್ಲ, ಮತ್ತು ಅದನ್ನು ಹೇಗೆ ಬಳಸಬೇಕೆಂಬುದನ್ನು ಸಹ ಅರಿತಿಲ್ಲ. ಇದು ಹೇಗಿದೆಯೆಂದರೆ, ಯಾರೋ ಒಬ್ಬರಿಗೆ ಅಪರೂಪದ ಪುಸ್ತಕಗಳಿಂದ ತುಂಬಿದ ಗ್ರಂಥಾಲಯವನ್ನು ನೀಡದ ಹಾಗೇ ಇದೆ. ವ್ಯಕ್ತಿಯು ಪುಸ್ತಕಗಳನ್ನು ಓದುವುದಕ್ಕಾಗಿ ಇಟ್ಟುಕೊಂಡಿಲ್ಲ, ಆದರೆ ಅವುಗಳನ್ನು ಪ್ರೋತ್ಸಾಹಿಸಲು ಮಾತ್ರ ಬಳಸಿಕೊಳ್ಳಲಾಗಿದೆ. ತುಂಬಾ ಅಮೂಲ್ಯವಾದದ್ದು ಎಷ್ಟು ನಿರುಪಯುಕ್ತವಾಗಿದೆ ಅಲ್ಲವೇ!

ಹೊಸ ಒಪ್ಪಂದದ ಕ್ರೈಸ್ತರಿಗೆ, ಹೇಗಾದರೂ, ಆ ಒಂದು ತೊಂದರೆಯೊಂದಿಗೆ ಕಷ್ಟಪಡುವ ಅಗತ್ಯವಿಲ್ಲ. ಇದಕ್ಕೆ ತದ್ವಿರುದ್ಧವಾಗಿ, ಶಿಲುಬೆಗೆ ಹಾಕಲ್ಪಟ್ಟು ಮತ್ತು ಮೃತ್ಯುಂಜಯನಾಗಿ ಎದ್ದ ರಕ್ಷಕನ ಅದ್ಭುತ ಸಮಾಚಾರವನ್ನು ತಿಳಿದಿರುವ ಎಲ್ಲರೂ (ಮತ್ತು ವೈಯಕ್ತಿಕವಾಗಿ ಅನುಭವ ಹೊಂದಿರುವವರು), ನಿತ್ಯಜೀವವನ್ನು ಪಡೆದುಕೊಳ್ಳಬೇಕೆಂತಲೂ, ಆನಂದವನ್ನು ಹೊಂದಬೇಕೆಂತಲೂ ಎಲ್ಲಾ ಕಡೆಯಲ್ಲಿರುವ ಪ್ರತಿಯೊಬ್ಬ ಮನುಷ್ಯ ಜೀವಿಗಳ ಪಾಪಗಳಿಗಾಗಿ ಸತ್ತನು. ಕ್ರಿಸ್ತಯೇಸುವಿನಲ್ಲಿ ವೈಯಕ್ತಿಕ ಅನುಭವನ್ನು ಹೊಂದಿದ್ದ ಅವನು ಅಥವಾ ಅವಳು ಈ ಅದ್ಭುತ ಸತ್ಯವನ್ನು ಪ್ರಪಂಚಕ್ಕೆ ಸಾರಲು ಮತ್ತಾಯ 23:19,20ರಲ್ಲಿ ವಿಸ್ಪಷ್ಟವಾದ ಕರೆಯನ್ನು ಪರಿಗಣಿಸಿರುವ ವಿಶ್ವಾಸಿಗಳಿಗೆ ನಿಶ್ಚಿತವಾಗಿ ಜೀವನದಲ್ಲಿ ಒಂದು ಉದ್ದೇಶ ಮತ್ತು ಧರ್ಮಪ್ರಚಾರ ಕಾರ್ಯವನ್ನು ಹೊಂದಿದ್ದಾರೆ. ಎಂತಹ ಭಾಗ್ಯವಲ್ಲವೇ! ಈ ಜಗತ್ತು ಕೊನೆಗೊಳ್ಳುವಾಗ, ನಾವು ಮಾಡುವ ಬೇರೆ ಯಾವುದೇ ಕಾರ್ಯಗಳಾದರೂ ಅಂತ್ಯಗೊಳ್ಳುತ್ತವೆ. ಆದರೆ ಸುವಾರ್ತೆಯನ್ನು ಇತರರಿಗೆ ಪ್ರಚುರಗೊಳಿಸುವುದೇನೆಂದರೆ ನಿತ್ಯತ್ವದ ಮೇಲೆ ಮುದ್ರೆಹಾಕುವ ಒಂದು ಕೆಲಸವಾಗಿದೆ. ಸೇವೆ ಮತ್ತು ಉದ್ದೇಶದ ಅರ್ಥದ ಬಗ್ಗೆ ಮಾತನಾಡಿರಿ!

**ಈ ದಿನದ ವಚನಗಳಿಗಾಗಿ ಅವುಗಳ ವಿವಿಧ ಅಂಶಗಳಲ್ಲಿ ವಿಶ್ಲೇಷಿಸಿರಿ. ಯಾವ ಕೆಲವು ನಿರ್ದಿಷ್ಟ ವಿಷಯಗಳನ್ನು ಯೇಸು ನಮಗೆ ಮಾಡಲು ಹೇಳುತ್ತಿದ್ದಾನೆ, ಮತ್ತು ಪ್ರತಿಯೊಂದರಲ್ಲೂ ಏನು ಒಳಗೊಂಡಿರುತ್ತದೆ? ಕ್ರಿಸ್ತನು ಆಜ್ಞಾಪಿಸಿದ್ದನ್ನು ಮಾಡಲು ನಮಗೆ ನಂಬಿಕೆ ಮತ್ತು ಧೈರ್ಯವನ್ನು ನೀಡುವ ಯಾವ ಭರವಸೆ ಇದೆ?**

**ಹೊಸ ಒಪ್ಪಂದದ ಕ್ರೈಸ್ತರಾದ ನಮಗೆ ಕರ್ತನು ತಾನೇ ಸ್ಪಷ್ಟ ಆದೇಶವನ್ನು ನೀಡಿದ್ದಾರೆ. ನಾವು ಯಾರೇ ಆಗಿರಲಿ, ನಮ್ಮ ಜೀವನದಲ್ಲಿ ನಿಲ್ದಾಣ ಯಾವುದೇ ಆಗಿರಲಿ, ನಮ್ಮ ಮಿತಿಗಳೇನೇ ಇರಲಿ, ನಾವೆಲ್ಲರು ಒಂದು ಪಾತ್ರವನ್ನು ವಹಿಸಬಹುದು. ನೀವು ಏನಾದರೂ ಮಾಡುತ್ತಿದ್ದೀರಾ? ನೀವು ಇನ್ನಷ್ಟು ಮಾಡಬಹುದೆ? ಈ ಕೆಲಸದಲ್ಲಿ ಹೆಚ್ಚಿನ ಪಾತ್ರವನ್ನು ನಿಭಾಯಿಸಲು, ಒಟ್ಟಾಗಿ, ನಿಮ್ಮ ತರಗತಿಯು ಏನು ಮಾಡಬಹುದು?**

**ಶುಕ್ರವಾರ** **ಜೂನ್ 25**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟ್‌ರವರ ದಿ ಗ್ರೇಟ್ ಕಾಂಟ್ರೊವರ್ಸಿಯಲ್ಲಿ 'ಗಾಡ್ಸ್ ಪೀಪಲ್ ಡಿಲಿವರ್ಡ್' ಪುಟಗಳು 635–645, ಸ್ಟೆಪ್ಸ್ ಟು ಕ್ರೈಸ್ಟ್‌ನಲ್ಲಿ 'ರೀಜಾಯ್ಸ್‌ಸಿಂಗ್ ಇನ್ ದಿ ಲಾರ್ಡ್' ಪುಟಗಳು 115–126.

"ದೇವರ ಪರಿಶುದ್ಧ ಮಗನಿಗೆ ಸಹಿಸಿಕೊಳ್ಳುವುದಕ್ಕೆ ತನ್ನದೇ ಆದ ಯಾವುದೇ ಪಾಪಗಳು ಮತ್ತು ವೇದನೆಗಳು ಇರಲಿಲ್ಲ; ಆತನು ಇತರರ ವೇದನೆಗಳನ್ನು ತಾಳಿಕೊಂಡನು; ಆತನ ಮೇಲೆ ನಮ್ಮೆಲ್ಲರ ಪಾಪಗಳನ್ನು ಹೊರಿಸಲಾಯಿತು. ದೈವೀಕ ಕರುಣೆಯ ಮೂಲಕ ಆತನು ತನ್ನನ್ನು ತಾನೇ ಮನುಷ್ಯನೊಂದಿಗೆ ಸೇರಿಸಿಕೊಳ್ಳುತ್ತಾನೆ, ಮತ್ತು ಜನಾಂಗದ ಪ್ರತಿನಿಧಿಯಾಗಿ ತನ್ನನ್ನು ಒಬ್ಬ ಪಾಪಾತ್ಮನಂತೆ ನಡೆಸಿಕೊಳ್ಳಲು ಒಪ್ಪಿಸಿಕೊಡುತ್ತಾನೆ, ನಮ್ಮ ಪಾಪಗಳ ದೆಸೆಯಿಂದ ನಮಗಾಗಿ ತೆರೆಯಲ್ಪಟ್ಟಿದ್ದ ತೀವ್ರ ಸಂಕಟದ ಪ್ರಪಾತದೊಳಗೆ ಆತನು ನೋಡುತ್ತಾನೆ, ಮತ್ತು ದೇವರ ಹಾಗೂ ಮನುಷ್ಯ ನಡುವೆ ಆದ ಅಗಾಧ ಅಂತರದ ಬೇರ್ಪಡಿಸುವಿಕೆಗೆ ಸೇತುವೆ ನಿರ್ಮಿಸಲು ಪ್ರಸ್ತಾಪಿಸುತ್ತಾನೆ"– ಎಲೆನ್ ಜಿ ವೈಟ್‌ರವರ ಬೈಬಲ್ ಇಕೋ ಅಂಡ್ ಸೈನ್ಸ್ ಆಫ್ ದಿ ಟೈಮ್ಸ್, ಆಗಸ್ಟ್ 1, 1892.

ನನ್ನ ಸಹೋದರನೇ ಬಾ, ಪಾಪಿಯಾಗಿ ಮತ್ತು ದುಷ್ಟನಾಗಿ, ನೀನು ಇದ್ದ ಹಾಗೆಯೇ ಬಾ. ನಿನ್ನ ಅಪರಾಧದ ಹೊರೆಯನ್ನು ಯೇಸುವಿನ ಮೇಲೆ ಹಾಕು, ಮತ್ತು ನಂಬಿಕೆಯಿಂದ ಆತನ ಅರ್ಹತೆಗಳನ್ನು ಗಳಿಸಿಕೋ. ಈಗಲೇ ಬಾ, ಕರುಣೆಯು ಸಮಯು ಇರುವಾಗಲೇ ಬಾ, ಪಾಪಗಳನ್ನು ಅರಿಕೆ ಮಾಡುವುದರೊಂದಿಗೆ ಬಾ, ಆತ್ಮದ ಪಶ್ಚಾತ್ತಾಪದೊಂದಿಗೆ ಬಾ, ಮತ್ತು ದೇವರು ಹೇರಳವಾಗಿ ಕ್ಷಮಿಸುತ್ತಾನೆ. ಮತ್ತೊಂದು ಅವಕಾಶವನ್ನು ಕಳೆದುಕೊಳ್ಳಲು ಧೈರ್ಯಮಾಡಬೇಡ. ಕ್ರಿಸ್ತನು ನಿಮಗೆ ಬೆಳಕನ್ನು ಹರಿಸುವಂತೆ ಸಾವಿನಿಂದ ಎದ್ದೇಳು. ಈಗ ನಿಮ್ಮೊಂದಿಗೆ ವಿಜ್ಞಾಪಿಸುತ್ತಿರುವ ಕರುಣೆಯ ಸ್ವರಕ್ಕೆ ಕಿವಿಗೊಡು. ಈಗ ಪ್ರತಿಕ್ಷಣವೂ ನೇರವಾಗಿ ಸ್ವತಃ ಅವುಗಳೇ ಕಾಣದ ಜಗತ್ತಿನ ವಿಧಿಗಳೊಂದಿಗೆ ಜೋಡಿಸುತ್ತವೆ. ನಂತರ ನೀಡಲಾದ ಕರುಣೆಯನ್ನು ಇನ್ನೂ ಮುಂದೆ ತಿರಸ್ಕರಿಸುವುದಕ್ಕೆ ನಿಮ್ಮ ಅಹಂಕಾರ ಮತ್ತು ಅಪನಂಬಿಕೆಯು ನಿಮ್ಮನ್ನು

ಕರೆದೊಯ್ಯಬಾರದು. ನೀವು ಮಾಡಿದರೆ, ಕೊನೆಗೆ ನಿಮ್ಮನ್ನು ದುಃಖಿಸಲು ಬಿಡಲಾಗುವುದು: "ಸುಗ್ಗಿ ತೀರಿತು, ಬೇಸಿಗೆ ಕಾಲ ಮುಗಿಯಿತು, ಆದರೆ ನಮಗೆ ರಕ್ಷಣೆಯಾಗಲಿಲ್ಲ" – ಎಲೆನ್ ಜಿ ವೈಟ್‌ರವರ ಟೆಸ್ಟಿಮೋನಿಸ್ ಫಾರ್ ದಿ ಚರ್ಚ್, ಸಂಪುಟ 5, ಪುಟ 353.

## ಆರೋಗ್ಯದ ಲೇಖನಮಾಲೆ
## ಹದಿಮೂರನೇ ವಾರ

### * ಸ್ತ್ರೀರೋಗ ಸಮಸ್ಯೆಗಳು

**ಸ್ತ್ರೀರೋಗ ಸಮಸ್ಯೆಗಳೆಂದರೇನು?**

ಸ್ತ್ರೀಯರ ಗುಪ್ತಾಂಗದಲ್ಲಿ ಕಂಡುಬರುವ ಸಾಧಾರಣ ತೊಂದರೆಗಳು.

**ಗುರುತಿಸುವುದು ಹೇಗೆ?**

1. ಸ್ತ್ರೀಯರ ಗುಪ್ತಾಂಗದಲ್ಲಿ ಸೋಂಕು ಉಂಟಾಗುತ್ತದೆ.
2. ಬಿಳಿ ಸೆರಗು
3. **ಹಿಮೋಫಿಲಸ್:** ಕೊಳೆತು ಹೋದ ಕಡಲೇಕಾಯಿ ಬೀಜದಂತೆ ವಾಸನೆ ಉಳ್ಳ ಮಂದವಾದ ಹಾಲಿನಂತ ವಸ್ತುವು ಗುಪ್ತಾಂಗದಿಂದ ಸ್ರವಿಸುತ್ತದೆ.
4. **ಕ್ಯಾನ್ಸರ್:** ನೀರಿನಂತಹ, ಬೂದುಬಣ್ಣದ ರಕ್ತಮಿಶ್ರಿತ ಕೆಟ್ಟವಾಸನೆಯ ಸ್ರಾವ.

**ಕಾರಣಗಳು:**

1. ಗುಪ್ತಾಂಗದ ಸೋಂಕಿನಿಂದ ಮೂತ್ರಿಸುವಾಗ ಉರಿತ.
2. ಬಿಳಿ ಸೆರಗು ತೀವ್ರತರವಾದ ನವೆ ಉಂಟುಮಾಡುವ ಸೋಂಕು.
3. ಹಿಮೋಫಿಲಸ್ ಒಂದು ಬ್ಯಾಕ್ಟೀರಿಯಾ ಮತ್ತು ಕ್ಯಾನ್ಸರ್ ಬಹುಶಃ ಒಂದು ವೈರಸ್.

**ಏನು ಮಾಡಬೇಕು?**

ಗುಪ್ತಾಂಗವನ್ನು ಶುಚಿಯಾಗಿಡಬೇಕು. ಆ ಪ್ರದೇಶವನ್ನು 1 ಲೀಟರ್ ಬಿಸಿ ನೀರಿಗೆ ಮೂರು ಟೀ ಚಮಚ ವಿನೇಗರ್ ಬೆರೆಸಿ ತೊಳೆಯಬೇಕು.

3 ದಿನಗಳಲ್ಲಿ ಈ ತೊಂದರೆ ನಿವಾರಣೆಯಾಗದಿದ್ದರೆ ವೈದ್ಯರನ್ನು ಕಾಣಿರಿ.

## * ಮೂತ್ರಾಂಗಗಳ ಸೋಂಕು:

**ಮೂತ್ರಾಂಗಗಳ ಸೋಂಕು ಎಂದರೇನು?**

ಮೂತ್ರಾಂಗ ನಾಳ ಪ್ರದೇಶವು ಬ್ಯಾಕ್ಟೀರಿಯಾ ಎಂಬ ವಿಷಾಣುವಿನ ದಾಳಿಗೊಳಗಾಗಿ ಸೋಂಕುಂಟಾಗುವುದು.

**ಗುರುತಿಸುವುದು ಹೇಗೆ?**

1. ಮೂತ್ರಿಸುವಾಗ ಉರಿ, ಕಿಬ್ಬೊಟ್ಟೆಯಲ್ಲಿ ನೋವು.
2. ಜ್ವರ ಚಳಿಜ್ವರ ಅಥವಾ ತಲೆನೋವು.
3. ಮೂತ್ರಪಿಂಡದಲ್ಲಿ ನೋವು, ಕೆಲವು ವೇಳೆ ನೋವು ಕಾಲುಗಳಿಗೆ ಹೋದಂತೆ ಅನುಭವ.
4. ಮೂತ್ರನಾಳ ಪ್ರದೇಶದಲ್ಲಿ ಉರಿತ, ಮೂತ್ರ ಬೂದು ಅಥವಾ ಕೆಂಪು ಬಣ್ಣದಿಂದ ಕೂಡಿರುತ್ತದೆ.

**ಕಾರಣವೇನು?**

ಬಲಗೈ ಮುಟ್ಟಿದ ಸ್ಥಳದಲ್ಲಿ, ಕೊಳಕಾದ ಎಡಗೈನಿಂದ ಮುಟ್ಟುವಾಗ, ಬ್ಯಾಕ್ಟೀರಿಯಾಗಳು ಅಲ್ಲಿ ನೆಲೆಯೂರಿ ಸೋಂಕಾಗುತ್ತದೆ.

**ಏನು ಮಾಡಬೇಕು?**

1. ದಿನಕ್ಕೆ ಕನಿಷ್ಟ 16 ಗ್ಲಾಸು ಅಂದರೆ ನಾಲ್ಕು ಲೀಟರ್ ನೀರು ಕುಡಿಯಿರಿ.
2. ಸೌಮ್ಯವಾದ ಸಾಬೂನಿನಿಂದ ಆ ಸ್ಥಳವನ್ನು ನಾಲ್ಕು ಸಾರಿ ತೊಳೆಯಬೇಕು.
3. ಕಿಬ್ಬೊಟ್ಟೆಯ ಕೆಳಭಾಗದಲ್ಲಿ ಬಿಸಿ ಹಾಗೂ ತಣ್ಣೀರಿನ ಶಾಖ ಕೊಡಿ.
4. ಎರಡು ದಿನಗಳಲ್ಲಿ ಗುಣಕಂಡು ಬರದಿದ್ದಲ್ಲಿ, ಸ್ತ್ರೀರೋಗ ತಜ್ಞರನ್ನು ಭೇಟಿ ಮಾಡಿರಿ.